ಸಾಕ್ಷಿಯನ್ನು ದಿಃ **24.02.2025** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಬಿ.ಎಸ್.ವೈ ಪರ ಶ್ರೀ ಎ.ಹೆಚ್.ಕೆ ವಕೀಲರಿಂದಃ-**

ನಾನು ಈ ದಾವೆಯಲ್ಲಿ ವಾದಿ ಆಗಿದ್ದು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ನನ್ನ ಮತ್ತು ಪ್ರತಿವಾದಿಯರ ಮಧ್ಯ ಆದ ನೊಂದಾಯಿತ ಮೂಲ ಕ್ರಯದ ಕರಾರನ್ನು ನಿಪಿ. 1 ಎಂದು ಗುರುತಿಸಲಾಯಿತು, ನಿಪಿ. 1 ರಲ್ಲಿ ಸಾಕ್ಷಿ ತನ್ನ, ಪ್ರತಿವಾದಿಯರ ಹಾಗೂ ಸಾಕ್ಷಿದಾರರಾದ ಸವಿತ ಮತ್ತು ಆಸೀಫ್ ಪಾಷಾ ಹಾಗೂ ದಾಖಲೆ ಬರೆದವರಾದ ಅವಿನಾಶ್ ರವರ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯಲ್ಲಿ ಸಾಕ್ಷಿಯ ಸಹಿಯನ್ನು ಒಟ್ಟಾಗಿ ನಿಪಿ. 1(ಎ) ಎಂದು, 1 ನೇ ಪ್ರತಿವಾದಿ ಸಹಿಯನ್ನು ಒಟ್ಟಾಗಿ ನಿಪಿ. 1 (ಬಿ) ಎಂದು, 2 ನೇ ಪ್ರತಿವಾದಿ ಸಹಿಯನ್ನು ಒಟ್ಟಾಗಿ ನಿಪಿ. 1 ಸಿ ಎಂದು, 3 ನೇ ಪ್ರತಿವಾದಿ ಸಹಿಯನ್ನು ಒಟ್ಟಾಗಿ ನಿಪಿ. 1 ಡಿ ಎಂದು, 4 ನೇ ಪ್ರತಿವಾದಿ ಸಹಿಯನ್ನು ಒಟ್ಟಾಗಿ ನಿಪಿ. 1 ಇ ಎಂದು 5 ನೇ ಪ್ರತಿವಾದಿ ಸಹಿಯನ್ನು ಒಟ್ಟಾಗಿ ನಿಪಿ. 1 ಎಫ್. ಎಂದು, ಸಾಕ್ಷಿದಾರರ ಸಹಿಗಳನ್ನು ನಿಪಿ. 1 ಜಿ. ಮತ್ತು ನಿಪಿ. 1 ಹೆಚ್ ಎಂದು, ದಾಖಲೆ ತಯಾರಿಸಿದವರ ಸಹಿಯನ್ನು ನಿಪಿ. 1 ಐ ಎಂದು ಗುರುತಿಸಲಾಯಿತು. ಸರ್ವೆ ನಂ. 17 ರ ಪಹಣಿಯನ್ನು ನಿಪಿ. 2 ಎಂದು, ನನ್ನ ವಕೀಲರ ಮೂಲಕ ನೊಟೀಸಿನ ಕಛೇರಿ ಪ್ರತಿಯನ್ನು ನಿಪಿ. 3 ಎಂದು, ಅದನ್ನು ಕಳುಹಿಸಿದ ಬಗ್ಗೆ 12 ಅಂಚೆ ರಶೀದಿಗಳನ್ನು ಕ್ರಮವಾಗಿ ನಿಪಿ. 4 ರಿಂದ 15 ಎಂದು, ಒಟ್ಟು 11 ವಾಪಸ್ಸಾದ ಅಂಚೆ ಕವರ್ ಗಳನ್ನು ನಿಪಿ. 16 ರಿಂದ 26 ಎಂದು ಗುರುತಿಸಲಾಯಿತು. ಸದರಿ ವಾಪಸ್ಸಾದ ಅಂಚೆ ಕವರ್ ಗಳನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರ ಒಳಗಿರುವ ನೊಟೀಸ್ ಗಳನ್ನು ನಿಪಿ. 16(ಎ) ಯಿಂದ ನಿಪಿ. 26(ಎ) ಎಂದು

ಗುರುತಿಸಲಾಯಿತು. 1 ಅಂಚೆ ಸ್ವೀಕೃತಿ ಪತ್ರವನ್ನು ನಿಪಿ. 27 ಎಂದು ಗುರುತಿಸಲಾಯಿತು. ದಿಃ 05.09.2024 ರಂದು ನನ್ನ ವಕೀಲರ ಮೂಲಕ ಪ್ರತಿವಾದಿಯವರಿಗೆ ಕಳುಹಿಸಿದ ನೋಟೀಸಿನ ಕಛೇರಿ ಪ್ರತಿಯನ್ನು ನಿಪಿ. 28 ಎಂದು, ಅದನ್ನು ಕಳುಹಿಸಿದ ಬಗ್ಗೆ 11 ಅಂಚೆ ರಶೀದಿಗಳನ್ನು 29 ರಿಂದ 39 ಎಂದು, 1 ಅಂಚೆ ಸ್ವೀಕೃತಿ ಪತ್ರವನ್ನು ನಿಪಿ. 40 ಎಂದು, ಒಟ್ಟು 10 ವಾಪಸ್ಸಾದ ಅಂಚೆ ಕವರ್ ಗಳನ್ನು ನಿಪಿ. 41 ರಿಂದ 50 ಎಂದು ಗುರುತಿಸಲಾಯಿತು. ಸದರಿ ವಾಪಸ್ಸಾದ ಅಂಚೆ ಕವರ್ ಗಳನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರ ಒಳಗಿರುವ ನೋಟೀಸ್ ಗಳನ್ನು ನಿಪಿ. 41(ಎ) ಯಿಂದ ನಿಪಿ. 50(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು 1, 3 ರಿಂದ 6 ನೇ ಪ್ರತಿವಾದಿಯರ ಪರಃ**

1, 3 ರಿಂದ 6 ನೇ ಪ್ರತಿವಾದಿಯರು ಏಕಪಕ್ಷೀಯರಾಗಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು 2 ನೇ ಪ್ರತಿವಾದಿ ಪರ ಶ್ರೀಮತಿ ಬಿ.ಕೆ.ಎಸ್ಃ**

2 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕರೆಯಲಾಯಿತು ಗೈರು ಹಾಜರು ಆದ್ದರಿಂದ 2 ನೇ ಪ್ರತಿವಾದಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.